# ಕೆಂಪಿಯ ಗುಟುರು!



ಕೆಲಸ ಬಿಡುತ್ತೇನೆಂದು ವರಾತ ತೆಗೆದ ಕೆಂಪಿಯನ್ನು ಒಲೈಸಲು ಕಲ್ಲಿ ಮಾಡಿದ ಕಸರತ್ತುಗಳೆಲ್ಲಾ ಫೇಲ್ ಆದವು. ಹಲವು ವರ್ಷಗಳಿಂದ ಮನೆಗೆ ಹೊಂದಿಕೊಂಡು ಕೆಲ್ಸಾ ಮಾಡ್ತಿದ್ದವಳು ಬಿಟ್ರೆ ಏನ್ಗತಿ ಎಂಬ ಆತಂಕ, ಹೊಸಬಳನ್ನೆಲ್ಲಿಂದ ಹುಡುಕಿ ತರಲಿ ಎಂಬ ಗೋಳಿನಲ್ಲೇ ಕೆಂಪಿಯ ಮೇಲೆ ಹೂಡಿದ ಕೊನೇ ಬಾಣವೂ ತಿರುಗಿ ಕಲ್ಲಿಯೆಡೆಗೇ ಬಂದಿತ್ತು!

**ಲತಾ ಹೆಗಡೆ**
ಕಲೆ: ಸಂತೋಷ್ ಸಸಿಹಿತ್ಲು

‘ಡಿಂಗ್ ಡಾಂಗ್’ ‘ಡಿಂಗ್ ಡಾಂಗ್!’ ‘ಸ್ವಲ್ಪ ತಡಿಯೇ ಬರ್ತಿದ್ದೀನಿ ಬೆಲ್ಲಿನ ಮೇಲಿಂದ ಬೆರಳು ತೆಗಿಯೇ ಕೆಂಪಿ ಮಗ ಕೆಲ್ಸ ಮಾಡ್ತಿದ್ದಾನೆ’ ಮಂಡಿ ನೋವಿಂದ ಮುಲುಗುತ್ತಲೇ ಅಡ್ಡಡ್ಡ ವಾಲಾಡುತ್ತಾ ಹೋದ ಕಲಾವತಿ ಅವಸರದಲ್ಲಿ ಬಾಗಿಲು ತೆರೆಯುವುದಕ್ಕೂ ಕೆಂಪಿ ಬೆಲ್ಲಿನ ಮೇಲಿಂದ ಬೆರಳನ್ನು ಸರಿಸುವುದಕ್ಕೂ ಸರಿ ಹೋಯಿತು.

‘ನಿಂಗೆಷ್ಟು ಸಲ ಹೇಳ್ಬೇಕು ಬೆಲ್ಲು ಒತ್ತಬೇಡ ಅಂತ. ಡಿಸ್ಟರ್ಬಾದ್ರೆ ಪ್ರಾಣಾಯಾಮ ಮಾಡ್ತಿರೋ ಅಂಕಲ್ಲಿಗೂ ಕೆಟ್ಟ ಕೋಪ ಬರುತ್ತೆ ಕಣೆ. ನಿನ್ನಿಂದಾಗಿ ನಾ ಬೈಸ್ಕೊಳ್ಳೋ ಹಾಗಾಗಿದೆ. ಎಷ್ಟು ಹೇಳಿದ್ರೂ ಅಷ್ಟೇ, ನಾಯಿ ಬಾಲ ಡೊಂಕಂತ ಸುಮ್ನೇ ಹೇಳ್ತಾರ್ಯೇ!’ ಕಲ್ಲಿಯ ಸಿಡುಕಿಗೆ ಕ್ಯಾರೇ ಎನ್ನದ ಕೆಂಪಿ ಸೊಂಟಕ್ಕೆ ಸೆರಗು ಸಿಕ್ಕಿಸುತ್ತಾ ಹಿತ್ತಲಿನ ಪಾತ್ರೆ ರಾಶಿಯೆಡೆಗೆ ನಡೆದಳು. ಪ್ಲಾಸ್ಟಿಕ್ ಟಬ್ಬಿನಲ್ಲಿ ಪೇರಿಸಿಟ್ಟಿದ್ದ ಪಾತ್ರೆಗಳನ್ನು ಒಮ್ಮೆಲೇ ನೆಲಕ್ಕೆ ಸುರಿದದ್ದಕ್ಕೆ ಪಾತ್ರೆಗಳು ಚೀರಾಡಿ, ನರಳಾಡಿದ್ದು ಜೋರಾಗಿಯೇ ಕೇಳಿಸಿತು. ಅವುಗಳ ಮೇಲೆ ರಭಸವಾಗಿ ಬೀಳುವ ನೀರಿನ ಶಬ್ದ ಸಾಥ್ ನೀಡಿತ್ತು. ಇಂದೇಕೋ ಅವಳ ವರಸೇನೇ ಬದಲಾಗಿದೆ, ಸಮಾಧಾನವಾಗಿಯೇ ವಿಚಾರಿಸಿಕೊಳ್ಳಬೇಕೆಂದು ಕಲ್ಲಿಯೂ ಸಹನೆಯಿಂದ ಕಾಯತೊಡಗಿದಳು.

ಹತ್ತು ನಿಮಿಷದಲ್ಲಿ ಪಾತ್ರೆ ರಾಶಿ ತೊಳೆದ ಶಾಸ್ತ್ರ ಮಾಡಿದ ಕೆಂಪಿ ಕವುಚಿಟ್ಟ ಪಾತ್ರೆಗಳ ಟಬ್ಬನ್ನು ಒಳಗೆ ತಂದವಳೇ ಅಡುಗೆಮನೆ ಸಿಂಕಿನ ಪಕ್ಕದಲ್ಲಿ ಕುಕ್ಕಿದಳು. ಕುಕ್ಕಿಸಿಕೊಂಡ ರಭಸಕ್ಕೆ ಪಾತ್ರೆಗಳೆಲ್ಲವೂ ಒಗ್ಗಟ್ಟಿನಲ್ಲಿ ಠಣ್ ಠಣಾರೆಂದು ಮತ್ತೆ ಸದ್ದು ಹೊರಡಿಸಿದವು. ಇಂದೇಕೆ ಕೆಂಪಿ ಚಂಡಿಯಂತಾಡ್ತಿದ್ದಾಳೆ? ಓಹೋ! ಮತ್ತದೇ ಕೆಲಸ ಬಿಡುವ ಧಮಕಿ ಇರಬೇಕು ಯಾವುದಕ್ಕೂ ಮೊದಲು ತಾಳ್ಮೆಯಿಂದ ಮಾತಾಡಿ ನಂತರ ಜಬರಿಸಬೇಕೆಂದುಕೊಂಡ ಕಲ್ಲಿ ಎಂದಿನಂತೆ ಬಿಸಿ ಚಹಾ, ಬಿಸ್ಕತ್ತು ನೀಡಿದಳು. ದಿನವೂ ರುಚಿಯಿರದ ಮಾರಿ ಬಿಸ್ಕತ್ತು ಕೊಡುತ್ತಿದ್ದವಳು ಇಂದು ಗೋಡಂಬಿ ಬಿಸ್ಕತ್ತನ್ನು ಕೊಟ್ಟು ಸೊಪ್ಪು ಬಿಡಿಸುವ ಕೆಲಸದಲ್ಲಿ ಮಗ್ನಳಾದಳು. ಕೆಂಪಿ ಚಹಾವನ್ನು ಸೊರ್ರನೆ ಹೀರಿದ ಸದ್ದು ಕೇಳಿದ ಮೇಲಷ್ಟೇ ಮಾತಿಗೆ ಶುರುವಿಟ್ಟಿದ್ದು.

‘ಏನೇ ಕೆಂಪಿ, ಅಷ್ಟು ಅವುಸ್ರ ಮಾಡ್ತಿದ್ದೀ ಎಲ್ಲಾದ್ರೂ ಹೋಗ್ಬೇಕೇನೇ? ಯಾಕೋ ಒಂಥರಾ ಇದ್ದೀಯಲ್ಲಾ ಹುಷಾರಿಲ್ವೇನೇ? ಅಥವಾ ಗಂಡನ ಜೊತೆ ಜಗಳ ಗಿಗಳ ಏನಾದ್ರೂ’

‘ಅದೆಲ್ಲಾ ಯೇನಿಲ್ಲ ಬುಡಕ್ಕೋ ಇನ್ನೊಂದ್ವಾರ ಅಟೇಯಾ ನಿಮ್ತಾವುಕ್ಕೆ ನಾ ಕೆಲ್ಸಕ್ಕೆ ಬರಾದು ದೊಡ್ಡಾಸ್ಪತ್ರೇಲಿ ಆಯಾ ಕೆಲ್ಸಾ ಸಿಕ್ಕೈತೆ’ ಕೆಂಪಿಯ ಧೋರಣೆಯ ಮಾತಿಗೆ ಕಲ್ಲಿಯ ಪಿತ್ತ ನೆತ್ತಿಗೇರಿದ್ದು ಜರ್ರನೆ ಇಳಿದಿತ್ತು. ಇದೀಗ ನಿಜಕ್ಕೂ ಥಂಡಾ ಹೊಡೆದುಬಿಟ್ಟಳು ಕಲ್ಲಿ. ಕಲ್ಲಿ ಮನೆಯ ನಿಧಾನಗತಿಯ ರೀತಿ, ರಿವಾಜಿಗೆ ಕೆಂಪಿ ಹೊಂದುಕೊಂಡಂತೆ ಯಾರೂ ಹೊಂದಿರಲಿಲ್ಲ; ಅವಳ ಬಾಯಿ ಜೋರು, ಕೆಲಸ ಒರಟಾದರೂ ಹೇಳಿದ್ದನ್ನು ಕೇಳಿ ಸಿಡುಕಿದರೂ ತಿದ್ದಿಕೊಳ್ಳುತ್ತಿದ್ದಳು. ಒಂದೊಂದೇ ಪಾತ್ರೆ, ಪ್ಲೇಟು, ತಟ್ಟೆ, ಲೋಟ ಪೇರಿಸಿದರೂ ಬೇಸರಿಸದೆ ಕೆಲಸ ಮಾಡುತ್ತಿದ್ದಳು. ಒಳಗೊಳಗೇ ಗಾಬರಿಯಾದರೂ ಸಾವರಿಸಿಕೊಂಡ ಕಲ್ಲಿಯ ಉವಾಚ ಹೀಗಿತ್ತು.

‘ನಿಂದಿದ್ದದ್ದೇ ಅದೇನೇ ಅದು ಯಾವಾಗ್ಲೂ ಕೆಲ್ಸಾ ಬಿಡೋದ್ರಲ್ಲೇ ಇರ್ತೀ? ನಿಂದು ಗೊತ್ತಿಲ್ವಾ, ಮೊದ್ಲೇ ಅವುಸ್ರದ ಬುದ್ಧಿ ಅದ್ಯಾವ್ದೋ ಮನೇಲಿ ಬೆಳಗ್ಗೆಯಿಂದ ಸಂಜೆವರೆಗೂ ಇದ್ದು ಹೋಗೋ ಕೆಲ್ಸ ಸಿಕ್ತು ಅಂತ ಪುರುಸೊತ್ತಿಲ್ಲದಂಗೇ ಕೆಲ್ಸ ಬಿಟ್ಟಿದ್ದೂ ನೀನೇ ಹಂಗೇ ತಿಂಗಳು ಕಳೆಯೋಕ್ಕಿಲ್ಲ ಮತ್ತೆ ಕೆಲ್ಸಾ ಕೇಳ್ಕೊಂಡು ಬಂದಿದ್ದೂ ನೀನೇ’.

‘ಬಿಡ್ರಮ್ಮೋ ಆಯಮ್ಮನ ಮನ್ಯಾಗೆ ತುಸಾ ಕೆಲ್ಸಾನಾ? ಹಾಸಿಗೆ ಹಿಡ್ದಿರೋ ಅಜ್ಜೀ ಚಾಕರಿ